ಪಿಡಬ್ಲುಃ 1

ದಿನಾಂಕಃ 07-08-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್ ಯು ಎ ವಕೀಲರಿಂದಃ

ನನ್ನ ಖಾಯಂ ವಾಸ್ತವ್ಯ ಬಾಡದ ಗುಡೆಅಂಗಡಿ ಆಗಿರುತ್ತದೆ. ದಾವೆಯಲ್ಲಿ ಆ ರೀತಿ ಬರೆದಿದ್ದೇವೆ. ನಾನು ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕಾದರೆ ವಕೀಲರು ಅದನ್ನು ನನಗೆ ಓದಿ ಹೇಳಿದ್ದು ಅದನ್ನು ನಾನು ತಿಳಿದುಕೊಂಡಿದ್ದೇನೆ ಎಂದರೆ ಸರಿ. ನನ್ನ ವಾಸ್ತವ್ಯ ಮಿರ್ಜಾನನಲ್ಲಿ ಇರುತ್ತದೆ ಅಲ್ಲಿ ನಾನು ಜಾಗ ತೆಗೆದುಕೊಂಡಿದ್ದೇನೆ. ಅಲ್ಲಿ ಇರುವ ಮನೆಯನ್ನು ನನಗೆ ಯಾರೂ ಬಿಟ್ಟುಕೊಟ್ಟಿಲ್ಲಾ ಜಾಗವನ್ನು ಖರೀದಿಸಿ ನಾನೇ ಮನೆಯನ್ನು ಕಟ್ಟಿರುತ್ತೇನೆ. ಅದು ನನಗೆ ರಾಮಾ ಸುಬ್ರಾಯ ನಾಯ್ಕ ಇವರು ಬಿಟ್ಟುಕೊಟ್ಟ ಜಾಗ ಎಂದರೆ ಸರಿಯಲ್ಲಾ. ನಾನು ಮನೆ ಕಟ್ಟಿಸಿ ಈಗ್ಗೆ 10-12 ವರ್ಷಗಳಾಗಿವೆ. ರಾಮಾ ಸುಬ್ರಾಯ ನಾಯ್ಕ ಇವರಿಂದ ನನಗೆ ವಿಚ್ಛೇದನಾ ಬೇಕು ಎಂದು ಮಾನ್ಯ ಹಿರಿಯ ಸಿವಿಲ್ ನ್ಯಾಯಲಯದಲ್ಲಿ ಎಂ ಸಿ ನಂಬರ 31/2009 ನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲಾ. ನನ್ನ ಗಂಡ ಬದುಕಿದ್ದಾಗ ನಾನು ಮಿರ್ಜಾನನಲ್ಲಿ ವಾಸ್ತವ್ಯ ಮಾಡುತ್ತಿದ್ದೆ ಎಂದರೆ ಸರಿಯಲ್ಲಾ. ಈಗ ನನಗೆ ಒಂದು ದಾಖಲೆಯನ್ನು ತೋರಿಸುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ ಎಂದರೆ ನನಗೆ ಸಹಿ ಹಾಕುವಂತೆ ಹೇಳಿದ ಕಾರಣ ಸಹಿ ಹಾಕಿದ್ದೆ ಅದು ಯಾವ ವಿಷಯವಾಗಿ ಎಂದು ನನಗೆ ಗೊತ್ತಿಲ್ಲಾ. ಅದರಲ್ಲಿ ನನ್ನ ಗಂಡನ ಸಹಿ ಇದೆ ಎಂದರೆ ಸರಿಯಲ್ಲಾ. ನಾನು ನನ್ನ ಗಂಡನನ್ನು ಉಳಿಯಲು ಸಾಧ್ಯವಿಲ್ಲ ಮತ್ತು ಅವನಿಂದ ನನಗೆ ಏನು ಬೇಡಾ ಎಂದು ನ್ಯಾಯಾಲಯಕ್ಕೆ ಅರ್ಜಿ ಕೊಟ್ಟು ವಿವಾಹ ವಿಚ್ಛೇದನಾ ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲಾ. ಆ ಪ್ರಕಾರ ದಿನಾಂಕ 26-11-2011 ರಂದು ಆ ಪ್ರಕರಣದಲ್ಲಿ ಒಪ್ಪಿಗೆ ವಿವಾಹ ವಿಚ್ಛೇದನ ಆಗಿದೆ ಎಂದರೆ ಸರಿಯಲ್ಲಾ. ನನಗೆ ಮತ್ತು ನನ್ನ ಗಂಡನಿಗೆ ವಿವಾಹ ವಿಚ್ಛೇದನಾ ಆಗಿದೆ ಎಂದರೆ ಸರಿಯಲ್ಲಾ. ನಾನು ಕುಮಟಾದ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯಕ್ಕೆ ಯಾವಾಗಲಾದರೂ ಬಂದಿದ್ದೇನಾ ಎಂದರೆ ನನ್ನನ್ನು ಬರುವಂತೆ ಕರೆದಿದ್ದರಿಂದ ಬಂದಿದ್ದೆನು ಸಹಿ ಹಾಕಿ ಎಂದು ಕೇಳಿದ್ದಕ್ಕೆ ಸಹಿ ಹಾಕಿದ್ದೆನು ಬೇರೆ ಯಾವ ವಿಷಯವು ನನಗೆ ಗೊತ್ತಿಲ್ಲಾ. ಸಹಿ ಹಾಕಬೇಕೆಂದು ವಕೀಲರು ಹೇಳಿದ್ದರು. ಆ ರೀತಿ ನಾನು ಸಹಿಯನ್ನು ತೆರೆದ ನ್ಯಾಯಾಲಯದ ಮುಂದೆ ಹಾಕಿದ್ದೆನು ಎಂದರೆ ಸರಿ.

2. ನನ್ನ ಮತ್ತು 2 ಹಾಗೂ 3 ನೇ ವಾದಿಯರ ಆಧಾರ ಕಾರ್ಡ ಮತ್ತು ಪಡಿತರ ಚೀಟಿ ಮಿರ್ಜಾನ ವಿಳಾಸದಲ್ಲಿ ಇರುತ್ತದೆ. ನನ್ನ ಗಂಡ ರಾಮಾ ಸುಬ್ರಾಯ ನಾಯ್ಕ ಇವರು ಬದುಕಿದ್ದಾಗ ನಾನು ಮತ್ತು ನನ್ನ ಮಕ್ಕಳು ನೋಡಿಕೊಳ್ಳುತ್ತಿದ್ದೆವು. ನಾವು ನನ್ನ ಗಂಡನೊಂದಿಗೆ ಉಳಿಯಲು ಯಾವುದೇ ತೊಂದರೆ ಇರಲಿಲ್ಲಾ ಮತ್ತು ಮಿರ್ಜಾನ ದಲ್ಲಿ ವಾಸ್ತವ್ಯ ಮಾಡುವ ಅವಶ್ಯಕತೆ ಇರಲಿಲ್ಲಾ ಎಂದರೆ ನನ್ನ ಗಂಡ ನಮ್ಮ ಜೊತೆ ಮಿರ್ಜಾನದಲ್ಲಿ ಉಳಿದುಕೊಂಡಿದ್ದರು. ಆ ನಂತರ ಅಲ್ಲಿದ್ದ ಜಾಗವನ್ನು ಮಾರಾಟ ಮಾಡಿ ವಾಪಾಸು ಬಾಡಕ್ಕೆ ಹೋದರು. ಅದೇ ಜಾಗದಲ್ಲಿ ನಾವು ಇದ್ದೆವು ಎಂದರೆ ಸರಿಯಲ್ಲಾ. ನನ್ನ ಗಂಡ 2014 ನೇ ಇಸ್ವಿಯಲ್ಲಿ ಮೃತಪಟ್ಟಿದ್ದಾರೆ. ಅವರು ಜನವರಿ ತಿಂಗಳು 14 ನೇ ತಾರೀಖಿನಂದು

ಮೃತಪಟ್ಟಿರಬಹುದು ನಿಖರವಾಗಿ ನನಗೆ ಗೊತ್ತಿಲ್ಲಾ. ಅವರು ಬಾಡದಲ್ಲಿ ಮೃತಪಟ್ಟಿರುತ್ತಾರೆ. ಅವರ ಕ್ರಿಯಾಕರ್ಮಕ್ಕೆ ನಾನು ಮತ್ತು ನನ್ನ ಮಕ್ಕಳು ಹೋಗಿದ್ದೆವು. ಬಾಡದಲ್ಲಿ ಶಿವಾನಂದ ನಾರಾಯಣ ನಾಯ್ಕ ರವರ ಮನೆಯಲ್ಲಿ ಮೃತಪಟ್ಟಿರುತ್ತಾರೆ. ಆ ವಿಷಯವನ್ನು ನಾನು ನಮ್ಮ ವಕೀಲರಿಗೆ ದಾವೆ ಸಲ್ಲಿಸುವಾಗ ತಿಳಿಸಿಲ್ಲಾ. ನನ್ನ ಗಂಡ ಮೃತಪಟ್ಟ ನಂತರ ಕ್ರಿಯಾಕರ್ಮಗಳನ್ನು 2 ನೇ ಪ್ರತಿವಾದಿಯೇ ಮುಗಿಸಿರುತ್ತಾನೆ ಎಂದರೆ ನಾವೂ ಸಹ ಕ್ರಿಯಾ ಕರ್ಮ ವನ್ನು ಮಾಡಿಕೊಂಡು ಬಂದಿದ್ದೇವೆ. ನಾವು ಆ ರೀತಿ ಕ್ರಿಯಾಕರ್ಮವನ್ನು ಗೋಕರ್ಣದಲ್ಲಿ ಮಾಡಿಕೊಂಡು ಬಂದಿದ್ದೇವೆ. ನಾವು ಭಟ್ಟರ ಮನೆಯಲ್ಲಿ ಮಾಡಿದ್ದು ಅವರ ಹೆಸರು ನನಗೆ ಗೊತ್ತಿಲ್ಲಾ. ನಾವು ಕ್ರಿಯಾಕರ್ಮವನ್ನು ಮಾಡಿದ ಭಟ್ಟರ ಮನೆ ಗೋಕರ್ಣದಲ್ಲಿ ಎಲ್ಲಿ ಬರುತ್ತದೆ ಎಂದರೆ ನಾನು ನನ್ನ ಮಕ್ಕಳನ್ನು ಕಳುಹಿಸಿ ಮಾಡಿಸಿದ್ದೇನೆ ನಾನು ಹೋಗಿರಲಿಲ್ಲಾ. ನನ್ನ ಗಂಡನ ಪೊಟೋವನ್ನು ನೋಡಿದರೆ ನಾನು ಗುರುತಿಸುತ್ತೇನೆ. ನನಗೆ ಈಗ ಒಂದು ದಾಖಲೆಯನ್ನು ತೋರಿಸುತ್ತಿದ್ದು ಅದರಲ್ಲಿ ನನ್ನ ಗಂಡನ ಪೊಟೋ ಇದೆ. ಅದರಲ್ಲಿ ಕಾಣಿಸುತ್ತಿರುವ ಎರಡೂ ಪೊಟೋಗಳು ಅವರದೇ ಆಗಿರುತ್ತದೆ. ಈಗ ನನಗೆ ಸದರಿ ದಾಖಲೆಯಲ್ಲಿರುವ ಸಹಿಯನ್ನು ತೋರಿಸುತ್ತಿದ್ದು ಅದು ನನ್ನ ಗಂಡನ ಸಹಿ ಎಂದರೆ ಸರಿಯಲ್ಲಾ. ನನ್ನ ಗಂಡ ಸಹಿ ಹಾಕಿರುವ ದಾಖಲೆಗಳು ನಮ್ಮ ಮನೆಯಲ್ಲಿ ಇರಬಹುದು. ಅಂತಹ ದಾಖಲೆಗಳು ಯಾವುವು ಎಂದರೆ ನಾನು ನೋಡಿ ಹೇಳಬೇಕಾಗುತ್ತದೆ. ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ನನ್ನ ಗಂಡ ಹಾಜರಾಗಿ ಸಹಿ ಹಾಕಿದ್ದಾರೆ ಎಂದರೆ ನಾನು ಅವರು ಸಹಿ ಹಾಕಿರುವುದನ್ನು ನಾನು ನೋಡಿರುವುದಿಲ್ಲಾ. ನನ್ನ ಗಂಡನು ಸಹ ತೆರೆದ ನ್ಯಾಯಾಲಯದಲ್ಲಿ ಸಹಿ ಹಾಕಿದ್ದಾರೆ ಎಂದರೆ ನಾನು ನೋಡಿಲ್ಲಾ.

ಮುಂದುವರೆದ ಪಾಟೀ ಸವಾಲಿಗೆ ಶ್ರೀ ಎಸ್ ಯು ಎ ವಕೀಲರು ಸಮಯ ಕೇಳಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಕುಮಟಾ.